

# ರೈತ ಬಾಂಧವರೇ, ಗಮನಿಸುವಿರಾ?



ಸುಧಾ ಸಂದೀಪ್
ಎಂಎಸ್ಸಿ (ಕೃಷಿ)

ಹನಿಹನಿಗೂಡಿದರೆ ಹಳ್ಳ ತೆನೆತೆನೆಗೂಡಿದರೆ ಬಳ್ಳ ಎಂಬ ಮಾತನ್ನು ನಾವೆಲ್ಲರೂ ಕೇಳಿರುತ್ತೇವೆ ಇದರ ಅರ್ಥವು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ನಾನಿಲ್ಲಿ ಹೇಳ ಬಯಸುತ್ತಿರುವುದು ಇತ್ತೀಚಿಗೆ ನಮ್ಮ ರೈತರು ಎರಡು ವಿಷಯಗಳನ್ನು ನಿರ್ಲಕ್ಷಿಸುತ್ತಿರುವುದರಿಂದ ಆಗುತ್ತಿರುವ ನಷ್ಟದ ಬಗ್ಗೆ.

1. ಇನ್ನೇನು ಮಳೆಗಾಲ ಮುಗಿಯುತ್ತಾ ಬಂದಿದೆ. ಅದೆಷ್ಟು ಜನ ರೈತರು ಇಷ್ಟು ದಿನ ಬಿದ್ದ ಮಳೆ ನೀರನ್ನು ಭೂಮಿಗೆ ಹಿಂಗಿಸಿದರೋ ಅಥವಾ ಶೇಖರಿಸಿದರೋ ತಿಳಿಯದು. ಯಾರಿಗೆಲ್ಲ ಈ ವರ್ಷ ಮಳೆ ನೀರನ್ನು ಸಂಗ್ರಹಿಸಲು ಸಾಧ್ಯವಾಗಲಿಲ್ಲವೋ ಕನಿಷ್ಠಪಕ್ಷ ಮುಂಬರುವ ಬೇಸಿಗೆಯಲ್ಲಿ ಸರಿಯಾದ ಯೋಜನೆ ಮಾಡಿ ಮಳೆಗಾಲದಲ್ಲಿ ಬೀಳುವ ಮಳೆ ನೀರನ್ನು ಜಮೀನಿನಲ್ಲಿ ಹಿಡಿದಿಟ್ಟುಕೊಳ್ಳುವ ಬಗ್ಗೆ ಯೋಚಿಸಿದರೆ ಉತ್ತಮವಲ್ಲವೇ?

ನನಗೆ ಪರಿಚಯವಿರುವ ನಿವೃತ್ತ ಇಂಜಿನಿಯರ್ ಶ್ರೀ ಉಮೇಶ್‌ರವರು ತಮ್ಮ ತೋಟದಲ್ಲಿ ಹೊಸದಾಗಿ ನಿರ್ಮಿಸಿರುವ ಕೃಷಿ ಹೊಂಡಗಳು ತುಂಬಿರುವ ಚಿತ್ರಗಳನ್ನು ಕಳಿಸಿದಾಗ ನನಗೆ ಬಹಳ ಸಂತೋಷವಾಯಿತು. ಏಕೆಂದರೆ ಅವರ ಜಮೀನಿರುವುದು ಆನೇಕಲ್ ಸಮೀಪ ತಮಿಳುನಾಡಿಗೆ ಹೊಂದಿಕೊಂಡಿರುವ ಒಂದು ಗ್ರಾಮದಲ್ಲಿ. ಆ ಭಾಗದಲ್ಲಿ ನೀರಿನ ಅಭಾವ ತೀವ್ರವಾಗಿದೆ. ಇಂತಹ ಸಂದರ್ಭದಲ್ಲಿ ಉಮೇಶ್‌ರವರು ಕೃಷಿಹೊಂಡ ನಿರ್ಮಾಣ ಮಾಡಿ ಮಳೆ ನೀರು ಸಂಗ್ರಹಿಸಿರುವುದು ಶ್ಲಾಘನಾರ್ಹ ಸಂಗತಿ.

**ಇಂದು ಬದಲಾದ ಸನ್ನಿವೇಶಗಳಲ್ಲಿ ಕೇವಲ ಅಲ್ಯುಮಿನಿಯಂ ಫಾಸ್ಫೈಡ್‌ನಂತಹ ಹಾನಿಕಾರಕ ಔಷಧಗಳನ್ನು ಧಾನ್ಯಗಳ ಸಂರಕ್ಷಣೆಯಲ್ಲಿ ರೈತರು ಬಳಸುತ್ತಿರುವುದು ದುರ್ದೈವವೇ ಸರಿ. ನಾನಿಲ್ಲಿ ಕೇವಲ ಆರೋಗ್ಯ ಅಥವಾ ಪರಿಸರದ ವಿಚಾರವನ್ನು ಮಾತನಾಡುತ್ತಿಲ್ಲ. ಬದಲಾಗಿ ರಾಸಾಯನಿಕಗಳ ಆಗಮನದಿಂದ ಇಂದು ಭತ್ತದ ಹುಲ್ಲಿನಿಂದ ಮೂಡೆ ಕಟ್ಟುವ ಅಥವಾ ಜೇಡಿಮಣ್ಣಿನಿಂದ ವಾಡೆಯನ್ನು ತಯಾರು ಮಾಡುವ ಅಥವಾ ಬಿದಿರಿನಿಂದ ದೊಡ್ಡ ಬುಟ್ಟಿಗಳನ್ನು ಮಾಡುವ ಕಲೆ ಮರೆಯಾಗಿದೆ.**

ಇವರಂತೆ ಸಾವಿರಾರು ರೈತರು ಈಗಾಗಲೇ ವ್ಯವಸ್ಥಿತವಾಗಿ ಮಳೆನೀರನ್ನು ಸಂಗ್ರಹಿಸುವ ವ್ಯವಸ್ಥೆ ಮಾಡಿರುತ್ತಾರೆ. ಇದು ಕೇವಲ ಬೇಸಿಗೆ ಬೆಳೆಗೆ ಮಾತ್ರವಲ್ಲದೆ ಅಂತರ್ಜಲ ವೃದ್ಧಿಯಾಗಲು ಸಹಕಾರಿಯಾಗುತ್ತದೆ. ಮಿತ್ರರಾದ ಸಾಫ್ಟ್‌ವೇರ್ ಉದ್ಯೋಗಿ ಉದಯ ಭಾಸ್ಕರ್ ಅವರು ಹೊಸದಾಗಿ ಕೃಷಿ ಪ್ರಾರಂಭಿಸಿ ಅವರ ತೋಟದಲ್ಲಿ ಒಂದು ಕೃಷಿಹೊಂಡ ನಿರ್ಮಿಸಿ ಅದರಲ್ಲಿ ಮೀನನ್ನು ಸಹ ಸಾಕಿ ಕೊಂಚ ಆದಾಯ ಗಳಿಸುವುದನ್ನು ಕೇಳಿ ಆನಂದವಾಯಿತು.

2. ಹನಿ ಹನಿ ನೀರನ್ನು ಹಿಡಿದಿಟ್ಟುಕೊಂಡು ಅದರಿಂದ ಲಾಭ ಪಡೆದ ಅನೇಕ ರೈತರು ನನಗೆ ಪರಿಚಯವಿದ್ದಾರೆ. ಕೃಷಿಯಲ್ಲಿ ನೀರಿನ ಸಂಗ್ರಹ ಮತ್ತು ನಿರ್ವಹಣೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಧಾನ್ಯಗಳ ಸಂಗ್ರಹಣೆ ಮತ್ತು ಸಂರಕ್ಷಣೆ. ಬಿತ್ತನೆ ಬೀಜಕ್ಕಾಗಿ ಮತ್ತು ಆಹಾರವಾಗಿ ಎರಡಕ್ಕೂ ನಮ್ಮ ಹಿರಿಯರು ಹಲವು ರೀತಿಯ ವಿಧಾನಗಳನ್ನು ಅನುಸರಿಸುತ್ತಿದ್ದರು.

ಈಗಲೂ ನಮ್ಮ ತಾಯಿಯ ಮನೆಯಲ್ಲಿ ಕಣಜ, ಗುಡಾಣ, ವಾಡೆ, ಚೀಲಗಳ ಸಹಾಯದಿಂದ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದಾರೆ. ಅದರಲ್ಲೂ ಈಗ ರಾಗಿ ಕಟಾವಿನ ಸಮಯ. ಈ ಸಮಯದಲ್ಲಿ ಅಡುಗೆಗೆ ಬೇಕಾಗುವಷ್ಟು ರಾಗಿಯನ್ನು ಅಮ್ಮ ಬಹಳ ಜಾಗ್ರತೆಯಿಂದ ಎರಡು ವಾಡೆಗಳಲ್ಲಿ ಸಂಗ್ರಹಿಸುತ್ತಾರೆ. ಒಂದು ವಾಡೆಯಲ್ಲಿ ಅಂದಾಜು 150 ಕೆಜಿ ರಾಗಿ ಹಿಡಿಸುತ್ತದೆ. ಈ ವಾಡೆಗಳನ್ನು ನುರಿತ ಕುಂಬಾರರು ತಯಾರಿಸುತ್ತಾರೆ. ಉಳಿದ ರಾಗಿಯನ್ನು ಮಾರಾಟ ಮಾಡಲು ಕಣಜದಲ್ಲಿ ಶೇಖರಿಸುತ್ತಾರೆ. ಸಾಮಾನ್ಯವಾಗಿ ಕಟಾವಿನ ಸಂದರ್ಭದಲ್ಲಿ ಎಲ್ಲೆಲ್ಲೂ ಯಥೇಚ್ಛವಾಗಿ ಧಾನ್ಯಗಳು ಸಿಗುವುದರಿಂದ ಮಾರುಕಟ್ಟೆಯಲ್ಲಿ ದರ ಕೊಂಚ ಕಡಿಮೆಯಾಗಿರುತ್ತದೆ ಹಾಗಾಗಿ ಕಣಜದಲ್ಲಿ ಸಂಗ್ರಹಿಸಿ ಸೂಕ್ತ ಸಮಯದಲ್ಲಿ ಮಾರಾಟ ಮಾಡಬೇಕೆಂಬುದು ಅಮ್ಮನ ವಾದವಾಗಿರುತ್ತದೆ.





ಇನ್ನು ಬಿತ್ತನೆಗೆಂದು ಕೆಲ ಕಾಳುಗಳನ್ನು ಮಡಿಕೆಯಲ್ಲಿ ಹಾಕಿ ಅದರ ಬಾಯಿಯನ್ನು ಮುಚ್ಚಿ ಅದಕ್ಕೆ ಸಗಣಿ ಮತ್ತು ಕೆಂಪು ಮಣ್ಣಿನ ಲೇಪ ಹಾಕಿ ಗಾಳಿ ಆಡದಂತೆ ಮುಚ್ಚುತ್ತಾರೆ. ಇದನ್ನು ಮತ್ತೆ ಬಿತ್ತನೆ ಸಮಯದಲ್ಲಿ ತೆಗೆಯುತ್ತಾರೆ. ದೇಶಿ ಬೀಜಗಳ ಸಂರಕ್ಷಣೆ ಮಾಡುತ್ತಿರುವ ಕಾಳಪ್ಪನವರು ಸೊಪ್ಪು-ತರಕಾರಿ ಬೀಜಗಳಿಗೆ ಸಗಣಿ ಬೆರಣಿಯನ್ನು ಸುಟ್ಟು ಸಿಗುವ ಬೂದಿಯನ್ನು ಬೆರೆಸಿ ಬಹುಕಾಲ ಸಂಗ್ರಹಿಸುತ್ತಾರೆ. ಕುಂಬಳ ಹೀರೆ, ಸೋರೇಯಂತಹ ಕಾಯಿಗಳನ್ನು ಹಾಗೆ ಅಟ್ಟದ ಮೇಲೆ ಹಗ್ಗದ ಸಹಾಯದಿಂದ ಕಟ್ಟಿಬಿಡುತ್ತಾರೆ. ಇನ್ನೂ ನಾವು ಆಹಾರವಾಗಿ ಬಳಸುವ ಅಕ್ಕಿ, ರಾಗಿ, ಬೇಳೆಕಾಳುಗಳಿಗೆ ಕೊಂಚ ಉಪ್ಪು ಒಣಮೆಣಸಿನಕಾಯಿ ಬೇವಿನಸೊಪ್ಪು ತುಂಬೆ ಎಲೆಯನ್ನು ಬೆರಸುವುದರಿಂದ ಬಹಳ ಕಾಲ ಕೆಡದಂತೆ ಸಂಗ್ರಹಿಸಬಹುದು. ಕಾಳಪ್ಪನ ಸಲಹೆಯಂತೆ ನಾವು ಸಹ ನಮ್ಮ ಮನೆಯಲ್ಲಿ ನವಣೆ ಅಕ್ಕಿಗೆ, ಮೆಣಸಿನಕಾಯಿ ಉಪ್ಪು ಬೆರೆಸಿದರಿಂದ ತುಂಬಾ ಸಮಯದವರೆಗೆ ನವಣೆಗೆ ಹುಳ ಬೀಳಲಿಲ್ಲ.

ಇನ್ನು ಆಂಧ್ರ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಶ್ರೀಯುತ ವಿಜಯರಾಮ್‌ರವರು ಸುಭಾಷ್ ಪಾಳೇಕರ್‌ರವರ ಕೃಷಿಪದ್ಧತಿಯನ್ನು ಅನುಸರಿಸಿ ವ್ಯವಸಾಯ ಮಾಡುತ್ತಿದ್ದು ಬಹಳ ಜನರಿಗೆ ತರಬೇತಿಯನ್ನು ನೀಡುತ್ತಿದ್ದಾರೆ. SAVE ಎಂಬ ಸಂಸ್ಥೆ ಆರಂಭಿಸಿ ದೇಶಿ ಬೀಜಗಳ ಸಂರಕ್ಷಣೆ, ಮಳೆ ನೀರು ಕೊಯ್ಲು, ದೇಶಿ ಹಸುವಿನ ಹಾಲು ತುಪ್ಪದಿಂದ ಸಿಹಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ವಿಜಯರಾಮರವರು. ನಾನು ಒಮ್ಮೆ ಅವರ ವಿಕಾರಬಾದ್‌ನ ತೋಟಕ್ಕೆ ಭೇಟಿ ನೀಡಿದಾಗ ಅಲ್ಲಿ ಬಿದಿರಿನಿಂದ ಮಾಡಿದ ದೊಡ್ಡ ದೊಡ್ಡ ಬುಟ್ಟಿಗಳು ಕಾಣಿಸಿದವು. ನಾವು ಸಾಮಾನ್ಯವಾಗಿ ತಲೆ ಮೇಲೆ ಹೊರುವಂತಹ ಬುಟ್ಟಿಯನ್ನು ನೋಡಿರುತ್ತೇವೆ. ಆದರೆ ಇಲ್ಲಿನ ಬಿದಿರಿನ ಬುಟ್ಟಿಗಳು ಹತ್ತು ಜನರು ಒಳಗಡೆ ಆರಾಮವಾಗಿ ಮಲಗಬಹುದಾದಷ್ಟು ವಿಸ್ತಾರವಾಗಿತ್ತು. ಇದರ

**ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ನಮ್ಮ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಆಹಾರ ಧಾನ್ಯಗಳಲ್ಲಿ ಶೇ. 40 ರಷ್ಟು ಹಾಳಾಗುತ್ತಿದೆ ಎಂದರೆ ನೀವು ನಂಬಲೇಬೇಕು. ಸರ್ಕಾರವೇ ಹೇಳಿರುವ ಇದರ ಒಟ್ಟು ಮೌಲ್ಯ 92,651 ಕೋಟಿ ರೂಪಾಯಿನಷ್ಟಿದೆ. ಇಷ್ಟು ದೊಡ್ಡ ನಷ್ಟವನ್ನು ತಪ್ಪಿಸುವಲ್ಲಿ ಸರ್ಕಾರದ ಪಾತ್ರ ಎಷ್ಟಿದೆಯೋ ಅಷ್ಟೇ ಪಾತ್ರ ರೈತರು ಕೂಡ ವಹಿಸಬಹುದು.**







ಒಳಗೆ ಭತ್ತ ಹಾಕಿ ಹೊರಗಡೆ ಮಣ್ಣು ಸಗಣಿಯಿಂದ ಲೇಪನ ಮಾಡಿದರೆ ವರ್ಷಗಟ್ಟಲೆ ಭತ್ತ ಹಾಳಾಗುವುದಿಲ್ಲ.

ಕೆಲದಿನಗಳ ಹಿಂದೆ ಸ್ನೇಹಿತರೊಂದಿಗೆ ಮೈಸೂರು ಸಮೀಪದ ಶ್ರೀಯುತ ಎ.ಪಿ. ಚಂದ್ರಶೇಖರ್‌ರವರ ಇಂದ್ರಪ್ರಸ್ಥ ಸ್ವಾವಲಂಬಿ ತೋಟಕ್ಕೆ ಹೋಗಿದ್ದೆವು. ಅವರೊಬ್ಬ ಜ್ಞಾನದ ನಿಧಿ. ಅವರ ಬಗ್ಗೆ ಮತ್ತೊಮ್ಮೆ ಸವಿಸ್ತಾರವಾಗಿ ವಿವರಿಸುವೆ. ಆದರೆ ಒಂದು ಅಂಶ ಇಲ್ಲಿ ಗಮನಿಸಬೇಕು. ಅವರ ಮನೆಯ ಬಾಗಿಲಿನ ಹತ್ತಿರ ಹಜಾರದಲ್ಲಿ ಹುಲ್ಲಿನಿಂದ ಮಾಡಿದ ದೊಡ್ಡ ಡಬ್ಬಿಯ ಮಾದರಿಯ ವಸ್ತುವನ್ನು ತೂಗುಹಾಕಿದರು. ಕುತೂಹಲದಿಂದ ಏನೆಂದು ವಿಚಾರಿಸಿದಾಗ ಅದರ ಹೆಸರು ಮೂಡೆ ಇದರಲ್ಲಿ ದವಸ-ಧಾನ್ಯಗಳನ್ನು ಸಂಗ್ರಹಿಸಬಹುದೆಂದು ಹೇಳಿದರು. ಸುಮಾರು 20 ರಿಂದ 30 ಕೆ.ಜಿ ಹೊರಬಲ್ಲಂತಹ ಮೂಡೆ ಇಂದು ಬಹಳ ಅಪರೂಪ. ಭತ್ತದ ಹುಲ್ಲನ್ನು ಹಗ್ಗದ ರೀತಿ ನೈದು ಅದರಲ್ಲಿ ಭತ್ತಹಾಕಿ ಗಾಳಿ ಆಡದ ಹಾಗೆ ತುಂಬಿದರೆ ವರ್ಷಗಳ ಕಾಲ ಸಂಗ್ರಹಿಸಿಡಬಹುದು.

ಇಂತಹ ಅನೇಕ ಸಾಂಪ್ರದಾಯಿಕ ಪದ್ಧತಿಗಳನ್ನು ನಮ್ಮ ಪೂರ್ವಿಕರು ಧಾನ್ಯ ಸಂರಕ್ಷಣೆಯಲ್ಲಿ ಅನುಸರಿಸುತ್ತಿದ್ದರು. ಆದರೆ ಇಂದು ಬದಲಾದ ಸನ್ನಿವೇಶಗಳಲ್ಲಿ ಕೇವಲ ಅಲ್ಯುಮಿನಿಯಂ ಫಾಸ್ಫೈಡ್‌ನಂತಹ ಹಾನಿಕಾರಕ ಔಷಧಗಳನ್ನು ಧಾನ್ಯಗಳ ಸಂರಕ್ಷಣೆಯಲ್ಲಿ ರೈತರು ಬಳಸುತ್ತಿರುವುದು ದುರ್ದೈವವೇ ಸರಿ. ನಾನಿಲ್ಲಿ ಕೇವಲ ಆರೋಗ್ಯ ಅಥವಾ ಪರಿಸರದ ವಿಚಾರವನ್ನು ಮಾತನಾಡುತ್ತಿಲ್ಲ. ಬದಲಾಗಿ ರಾಸಾಯನಿಕಗಳ ಆಗಮನದಿಂದ ಇಂದು ಭತ್ತದ ಹುಲ್ಲಿನಿಂದ ಮೂಡೆ ಕಟ್ಟುವ ಅಥವಾ ಜೇಡಿಮಣ್ಣಿನಿಂದ ವಾಡೆಯನ್ನು ತಯಾರು ಮಾಡುವ ಅಥವಾ ಬಿದಿರಿನಿಂದ ದೊಡ್ಡ ಬುಟ್ಟಿಗಳನ್ನು ಮಾಡುವ ಕಲೆ ಮರೆಯಾಗಿದೆ. ಹೇಗೆ ಗಾಣಗಳು ನಿಂತು ಹೋಗಿದ್ದರಿಂದ ಆಚಾರಿಗಳಿಗೆ ಕೆಲಸವಿಲ್ಲದಂತಾಗಿದೆ (ಇಂದು ಗಾಣದ ಕೆಲಸ ಮಾಡುವವರು ಒಬ್ಬರು ಇಬ್ಬರು ಕಾಣಿಸುತ್ತಿದ್ದಾರೆ) ಅದೇ ರೀತಿ ಕಣಜ ತಯಾರುಮಾಡುವ, ಮೂಡೆ ಕಟ್ಟುವ, ವಾಡೆ ಮಾಡುವ ಜನರು ಅತ್ಯಂತ ವಿರಳವಾಗಿದ್ದಾರೆ. ಧಾನ್ಯಗಳ ಸಂರಕ್ಷಣೆ ಮಾಡುವ ಸಂಸ್ಕೃತಿಯೇ ನಾಶವಾದಂತೆ ಆಗಿದೆ. ಇದು ನನಗೆ ಅತ್ಯಂತ ಬೇಸರ ತರುವ ಸಂಗತಿ.

ಒಂದು ಕಡೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೀತಲಿ ಘಟಕ, ಅತ್ಯಾಧುನಿಕ ಗೋದಾಮುಗಳ ನಿರ್ಮಾಣಕ್ಕೆ ಸಾವಿರಾರು ಕೋಟಿ ವ್ಯಯಿಸುತ್ತಿದೆ. ಕೆಲವು ಸಂದರ್ಭಗಳಲ್ಲಿ ವಿಶೇಷವಾಗಿ ಹಣ್ಣು ತರಕಾರಿ ಮತ್ತಿತರ ಬೇಗ ಹಾಳಾಗುವಂತಹ ಪದಾರ್ಥಗಳಿಗೆ ಇಂತಹ ವ್ಯವಸ್ಥೆ ಅವಶ್ಯಕತೆ ಇದೆ. ಆದರೆ ಅದು ಬಿಟ್ಟರೆ, ಬಹುತೇಕ ಎಲ್ಲ ಧಾನ್ಯಗಳು ಮತ್ತು ಕಾಳುಗಳನ್ನು ರೈತರೇ ಸಂಗ್ರಹಿಸಿಡಬಹುದು ಅಲ್ಲವೇ?

ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ನಮ್ಮ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಆಹಾರ ಧಾನ್ಯಗಳಲ್ಲಿ ಶೇ. 40 ರಷ್ಟು ಹಾಳಾಗುತ್ತಿದೆ ಎಂದರೆ ನೀವು ನಂಬಲೇಬೇಕು. ಸರ್ಕಾರವೇ ಹೇಳಿರುವ ಇದರ ಒಟ್ಟು ಮೌಲ್ಯ 92,651 ಕೋಟಿ ರೂಪಾಯಿನಷ್ಟಿದೆ. ಇಷ್ಟು ದೊಡ್ಡ ನಷ್ಟವನ್ನು ತಪ್ಪಿಸುವಲ್ಲಿ ಸರ್ಕಾರದ ಪಾತ್ರ ಎಷ್ಟಿದೆಯೋ ಅಷ್ಟೇ ಪಾತ್ರ ರೈತರು ಕೂಡ ವಹಿಸಬಹುದು. ನಮ್ಮ ಪೂರ್ವಿಕರಂತೆ ಇಂದಿನ ರೈತರು ಸಹ ತಮಗೆ ಎಷ್ಟು ಸಾಧ್ಯವೋ ಅಷ್ಟನ್ನು ಸರಿಯಾದ ರೀತಿಯಲ್ಲಿ ಸಂಗ್ರಹಿಸಿದರೆ ಬಹಳ ದೊಡ್ಡ ನಷ್ಟ ತಪ್ಪಿಸಬಹುದು. ಸ್ವಲ್ಪವಾದರೂ ಮೌಲ್ಯವರ್ಧನೆಮಾಡಿ ಮಾರಾಟ ಮಾಡುವುದರಿಂದ ರೈತರಿಗೂ ಆರ್ಥಿಕವಾಗಿ ಸಹಾಯವಾಗುತ್ತದೆ.

ಮಿತ್ರರಾದ ಪ್ರಮೋದ್‌ರವರು ಸಗಣಿ ಮತ್ತು ಕೆಲ ಗಿಡಮೂಲಿಕೆಗಳ ಸಹಾಯದಿಂದ ಅಲುಮಿನಿಯಂ ಫಾಸ್ಫೈಡ್ ಮಾತ್ರೆಗೆ ಬದಲಿಯಾಗಿ ಒಂದು ಸಾವಯವ ಮಾತ್ರೆಯನ್ನು ತಯಾರಿಸಲು ಪ್ರಯೋಗ ಮಾಡುತ್ತಿದ್ದಾರೆ. ಇವರಂತೆ ಯುವಕರು ಸರಳವಾದ ರೀತಿಯಲ್ಲಿ ಆಹಾರ ಧಾನ್ಯಗಳ ಸಂರಕ್ಷಣೆ ಮಾಡುವ ವಿಧಾನಗಳನ್ನು ಕಂಡುಹಿಡಿದು ಅಥವಾ ಪೂರ್ವಿಕರು ಅನುಸರಿಸಿದ ಮಾರ್ಗಗಳನ್ನು ಮತ್ತೆ ಮೆಲಕುಹಾಕಿ ನಮ್ಮ ರೈತರ ಮುಂದಿಟ್ಟು ಆಹಾರಧಾನ್ಯಗಳ ನಷ್ಟವಾಗುವುದನ್ನು ತಡೆಗಟ್ಟಬಹುದು ಅಲ್ಲವೇ?